**ಕರ್ನಾಟಕ ಸರ್ಕಾರ**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು**
**ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 03**
**ದೂರವಾಣಿ ಸಂಖ್ಯೆ: 2334615, 23562283, ಫ್ಯಾಕ್ಸ್: 080–23347670**

ಸಂಖ್ಯೆ: ಕೆ.ಎಸ್.ಕ್ಯೂ.ಎ.ಎ.ಸಿ./ಉ.ಆ.ತ/29/2012–13 ದಿನಾಂಕ: 23–08–2012

**ಸುತ್ತೋಲೆ**

ವಿಷಯ:– ದಿನಾಂಕ: 31–08–2012 ರಂದು ಕೆ.ಎಸ್.ಕ್ಯೂ.ಎ.ಎ.ಸಿ. ಸಂಸ್ಥೆಯಿಂದ ನಡೆಸಲಿರುವ ಉಪಗ್ರಹ ಆಧಾರಿತ ತರಬೇತಿಗೆ ಬ್ಲಾಕ್ / ಡಯಟ್ ಗಳ ಪ್ರಸರಣಾ ಕೇಂದ್ರದಲ್ಲಿ ಹಾಜರಾಗುವ ಕುರಿತು.

*************

ಕೆ.ಎಸ್.ಕ್ಯೂ.ಎ.ಓ. ಸಂಸ್ಥೆಯು NAAC ಮಾದರಿಯಲ್ಲಿ ತನ್ನ ರೂಪುರೇಷೆಗಳನ್ನು ಬದಲಾಯಿಸಿಕೊಂಡು ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಹಾಗೂ ಅಂಗೀಕರಣ ಪರಿಷತ್ತು (Karnataka School Quality Assessment and Accreditation Council) KSQAAC ಆಗಿ ಪರಿವರ್ತನೆಗೊಂಡಿದೆ. KSQAAC ಯ ರೂಪುರೇಶೆ, ಧ್ಯೇಯೋದ್ಧೇಶ, ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ 2012–13 ನೇ ಸಾಲಿನಲ್ಲಿ ಆಯ್ದ ಶಾಲೆಗಳ 3, 5, 7 ನೇ ತರಗತಿಗಳಿಗೆ ನಡೆಸುವ ಬೇಸ್ ಲೈನ್ ಅಧ್ಯಯನದ ಬಗ್ಗೆ ವಿವಿಧ ಹಂತದ ಅನುಷ್ಠಾನಾಧಿಕಾರಿಗಳಿಗೆ ಅರಿವು ಮೂಡಿಸುವ ಸಲುವಾಗಿ ದಿನಾಂಕ: 31–08–2012 ರಂದು ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸದರಿ ಕಾರ್ಯಕ್ರಮವನ್ನು ಮಾನ್ಯ ಶಿಕ್ಷಣ ಸಚಿವರು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇವರು ಉದ್ಘಾಟಿಸುತ್ತಾರೆ. ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಕಾರ್ಯದರ್ಶಿಗಳು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ ಮತ್ತು ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಉಪಸ್ಥಿತರಿರುತ್ತಾರೆ.

ಜಿಲ್ಲಾ ಹಂತದ 34 ಹಾಗೂ ತಾಲ್ಲೂಕು ಹಂತದ 204 ಸ್ವೀಕೃತಿ ಕೇಂದ್ರಗಳಲ್ಲಿ ಭಾಗವಹಿಸುವ ಅಧಿಕಾರಿಗಳು:–

**ತಾಲ್ಲೂಕು ಹಂತದಲ್ಲಿ**: ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲಾಧಿಕಾರಿಗಳು(ಬಿ.ಆರ್.ಸಿ.) ಶಿಕ್ಷಣ ಸಂಯೋಜಕರು, ಬಿ.ಆರ್.ಪಿ. , ಸಿ.ಆರ್.ಪಿ., ಐ.ಇ.ಆರ್.ಟಿ, ತಾಲ್ಲೂಕಿನಲ್ಲಿ ಪೈಲೆಟ್ ಅಧ್ಯಯನಕ್ಕೆ ಆಯ್ಕೆಯಾದ 5 ಶಾಲೆಗಳ ಮುಖ್ಯಶಿಕ್ಷಕರು.

**ಜಿಲ್ಲಾ ಹಂತದಲ್ಲಿ**: ಉಪನಿರ್ದೇಶಕರು ಆಡಳಿತ ಹಾಗೂ ಅಭಿವೃದ್ಧಿ, ಶಿಕ್ಷಣಾಧಿಕಾರಿಗಳು (ಇ.ಓ), ಇಬ್ಬರು ವಿಷಯ ಪರಿವೀಕ್ಷಕರು, ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು, ಎಸ್.ಎಸ್.ಎ.(ಡಿ.ವೈ.ಪಿ.ಸಿ.), ಸಹಾಯಕ ಕಾರ್ಯಕ್ರಮ ಸಮನ್ವಯಾಧಿಕಾರಿಗಳು, ಡಯಟ್‌ನಿಂದ ನೇಮಿಸಲ್ಪಟ್ಟಿರುವ ಕೆ.ಎಸ್.ಕ್ಯೂ.ಎ.ಎ.ಸಿ.ಯ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳು ಸದರಿ ದಿನದಂದು ಸ್ವೀಕೃತಿ ಕೇಂದ್ರದಲ್ಲಿ ತಪ್ಪದೇ ಹಾಜರಾಗಲು ತಿಳಿಯಪಡಿಸಿದೆ. ನಿಮ್ಮ ಅಧೀನ ಅಧಿಕಾರಿಗಳು/ಸಿಬ್ಬಂದಿಯವರು ಕಾರ್ಯಕ್ರಮದಲ್ಲಿ ತಪ್ಪದೇ ಭಾಗವಹಿಸುವುದು. ನಿಯೋಜಿತ ಎಲ್ಲಾ ಅಧಿಕಾರಿಗಳು ಹಾಜರಾಗುವಂತೆ ಕ್ರಮ ಕೈಗೊಳ್ಳುವುದು. ದಿನಾಂಕ: 31–08–2012 ರಂದು ಇತರೆ ಯಾವುದೇ ತರಬೇತಿಗಳಿದ್ದರೆ ಅಂತಹ ತರಬೇತಿಗಳನ್ನು ಮುಂದೂಡಲು ತಿಳಿಸಿದೆ. ಸ್ವೀಕೃತಿ ಕೇಂದ್ರಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು, ವಿದ್ಯುತ್‌ನಲ್ಲಿ ವ್ಯತ್ಯಯವಾದಾಗ ಜನರೇಟರ್ ಉಪಯೋಗಿಸತಕ್ಕದ್ದು.

ಪು.ತಿ.ನೋ.

**ಉಪಗ್ರಹ ಆಧಾರಿತ ತರಬೇತಿ ದಿನಾಂಕ: 31-08-2012**

**ಸಮಯ: ಬೆಳಿಗ್ಗೆ 10.00 ಗಂಟೆ**

ಈ ಕಾರ್ಯಕ್ರಮಕ್ಕೆ ಅನುಬಂಧ 1 ರಲ್ಲಿ ಸೂಚಿಸಿದಂತೆ ವೆಚ್ಚ ಭರಿಸುವುದು. ಆರ್.ಟಿ.ಜಿ.ಎಸ್. ಮೂಲಕ ಭಾಗವಹಿಸುವ ಅಧಿಕಾರಿಗಳ ಸಂಖ್ಯೆಗನುಗುಣವಾಗಿ ಉಪನಿದೇಶಕರು (ಅಭಿವೃದ್ಧಿ)ರವರಿಗೆ ಹಣ ಬಿಡುಗಡೆ ಮಾಡಿದೆ. ಸದರಿ ಹಣವನ್ನು ಅನುಬಂಧದಲ್ಲಿ ಕಾಣಿಸಿರುವ ದರದಂತೆ ಭಾಗವಹಿಸುವ ಶಿಬಿರಾರ್ಥಿಗಳಿಗೆ ಲಘು ಉಪಾಹಾರ ಒದಗಿಸುವುದು. ಹಾಜರಾದ ಅಧಿಕಾರಿಗಳ ಸಂಖ್ಯೆಗನುಗುಣವಾಗಿ ಖರ್ಚು ವೆಚ್ಚಗಳನ್ನು ಲೆಕ್ಕಹಾಕಿ ಉಪಯೋಗಿತ ಪ್ರಮಾಣ ಪತ್ರವನ್ನು ದಿನಾಂಕ: 10-09-2012 ರೊಳಗೆ ರಾಜ್ಯ ಕಛೇರಿಗೆ ತಲುಪುವಂತೆ ಕಳುಹಿಸುವುದು. ಉಳಿಕೆ ಹಣವನ್ನು "ನಿರ್ದೇಶಕರು ಕೆ.ಎಸ್.ಕ್ಯೂ.ಎ.ಎ.ಸಿ." ಇವರ ಹೆಸರಿಗೆ ಬ್ಯಾಂಕ್ ಹುಂಡಿಯ ಮೂಲಕ ಕಳುಹಿಸುವುದು.

ತಮ್ಮ ನಂಬುಗೆಯ

23/8/12

(ಡಿ.ವೆಂಕಟೇಶಯ್ಯ)
ನಿರ್ದೇಶಕರು ಪರೀಕ್ಷೆಗಳು
ಕೆ.ಎಸ್.ಕ್ಯೂ.ಎ.ಎ.ಸಿ.
ಬೆಂಗಳೂರು

ಪ್ರತಿಯನ್ನು,

1. ಮಾನ್ಯ ಆಯುಕ್ತರು ಸಾ.ಶಿ.ಇ. ಬೆಂಗಳೂರು /ಅಪರ ಆಯುಕ್ತರು ಧಾರವಾಡ ಹಾಗೂ ಗುಲ್ಬರ್ಗಾರವರಿಗೆ ಮಾಹಿತಿಗಾಗಿ ಗೌರವಾಧಾರಗಳೊಂದಿಗೆ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ)/ ಡಯಟ್ ಪ್ರಾಂಶುಪಾಲರು/ಜಿಲ್ಲಾ ಸಮನ್ವಯಾಧಿಕಾರಿಗಳು/ ಜಿಲ್ಲಾ ನೋಡಲ್ ಅಧಿಕಾರಿಗಳು / ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
3. ಕಾರ್ಯದರ್ಶಿಗಳು / ನಿರ್ದೇಶಕರು ಪರೀಕ್ಷೆಗಳು ಇವರ ಆಪ್ತ ಶಾಖೆಗೆ. ಮಾಹಿತಿಗಾಗಿ.
4. ಕಛೇರಿ ಪ್ರತಿ.

## ಅನುಬಂಧ – 1

**ತಾಲ್ಲೂಕು ಹಾಗೂ ಜಿಲ್ಲಾ ಹಂತಕ್ಕೆ ತಗಲುವ ಖರ್ಚು ವೆಚ್ಚಗಳ ವಿವರ.**

1) ಲಘು ಉಪಹಾರಕ್ಕೆ – 30.00 ರೂಗಳು (ಪ್ರತಿ ಶಿಬಿರಾರ್ಥಿಗಳಿಗೆ)

2) ಸಾಧಿಲ್ವಾರು – 15.00 ರೂಗಳು (ಪ್ರತಿ ಶಿಬಿರಾರ್ಥಿಗಳಿಗೆ)

3) ಜನರೇಟರ್ – 500.00 ರೂಗಳು

4) ಕಾರ್ಯಕ್ರಮ ನಿರ್ವಾಹಕರು – 100.00 ರೂಗಳು

5) ಕಾರ್ಯಕ್ರಮ ನಿರ್ವಾಹಕರ ಸಹಾಯಕರು – 75.00 ರೂಗಳು

6) ಒರ್ವ 'ಡಿ' ದರ್ಜೆ ನೌಕರರಿಗೆ – 50.00ರೂಗಳು

7) ಕಾರ್ಯಕ್ರಮದಲ್ಲಿ ಭಾಗವಹಿಸುವ ಪೈಲೆಟ್ ಅಧ್ಯಯನಕ್ಕೆ ಆಯ್ಕೆಯಾಗಿರುವ ತಾಲ್ಲೂಕಿನ 5 ಶಾಲೆಗಳ ಮುಖ್ಯಶಿಕ್ಷಕರಿಗೆ ಎಸ್.ಎಸ್.ಎ. ನಿಯಮಾನುಸಾರ ಪ್ರಯಾಣ ಭತ್ಯೆ ನೀಡುವುದು.

ನಿರ್ದೇಶಕರು ಪರೀಕ್ಷೆಗಳು
ಕೆ.ಎಸ್.ಕ್ಯೂ.ಎ.ಎ.ಸಿ.
ಬೆಂಗಳೂರು